ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ವಿಜ್ಞಾನ ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಅ) ಈವರೆಗೆ ಯಾವ ತಾಲ್ಲೂಕುಗಳಿಗೂ ಹಣ ಬಿಡುಗಡೆ ಮಾಡಿಲ್ಲ.

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ ಹೊಸ ಯೋಜನೆಗಳನ್ನು ರೂಪಿಸಲು ಒತ್ತಾಯ

203 (904) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಹಣಕಾಸಿನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರ ವಿಮಾ ಇಲಾಖೆಯ ಮೂಲ ಉದ್ದೇಶಗಳೇನು;

ಆ) ಭಾರತೀಯ ಜೀವ ನಿಗಮದಂತೆ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ವಿಭಿನ್ನ ಅಭಿವೃದ್ಧಿ ಸ್ವರೂಪ ಪಡೆದಿಲ್ಲದಿರುವುದಕ್ಕೆ ಕಾರಣವೇನು;

ಇ) ಸರ್ಕಾರಿ ನೌಕರರು ಆದಾಯ ತೆರಿಗೆಯಿಂದ ರಿಯಾಯ್ತಿ ಪಡೆಯಲು ಉಳಿತಾಯ ಮಾಡುವ ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅಂಚೆ ಕಛೇರಿ ಮತ್ತಿತರ ಸಂಸ್ಥೆಗಳಲ್ಲಿ ರೂಪಿಸಿರುವಂತೆ ಸರ್ಕಾರ ವಿಮಾ ಇಲಾಖೆಯೂ ಸಹ ಉಳಿತಾಯ ಮಾಡುವಂತೆ ವಿವಿಧ ಯೋಜನೆಗಳನ್ನು ಜಾರಿ ಮಾಡದಿರಲು ಕಾರಣಗಳೇನು;

ಈ) ನೌಕರರು ವಿಮಾ ಪಾಲಿಸಿ ಪಡೆದಿರುವ ಸರ್ಕಾರಿ ನೌಕರರ ಸಂಖ್ಯೆ ಎಷ್ಟು; (ಪೂರ್ಣ ಪ್ರತ್ಯೇಕ ವಿವರಗಳನ್ನು ನೀಡುವುದು);

ಉ) ವಿಮಾ ಇಲಾಖೆಯಲ್ಲಿರುವ ಪಾಲಿಸಿದಾರರ ವಿಮಾ ನಿಧಿ ಮೊತ್ತವೆಷ್ಟು ? ಆ ಹಣವನ್ನು ಯಾವುದಕ್ಕೆ ಬಳಸುತ್ತಿದ್ದಾರೆ; ವಿಮಾ ನಿಧಿಯನ್ನು ಸರ್ಕಾರಿ ಕಲ್ಯಾಣ ಅಭಿವೃದ್ಧಿಗೆ ಬಳಸದಿರಲು ಕಾರಣಗಳೇನು;

ಊ) ಜೀವ ವಿಮಾ ನಿಗಮದಂತೆ ಕರ್ನಾಟಕ ಸರ್ಕಾರಿ ವಿಮಾ ನಿಧಿಯನ್ನು ಹೌಸಿಂಗ್ ಕಾರ್ಪೋರೇಷನ್ನು ಸೃಷ್ಟಿಸುವ ಮೂಲಕ ಸರ್ಕಾರಿ ನೌಕರರ ವಸತಿ ಸಮಸ್ಯೆ ಬಗೆಹರಿಸುವಲ್ಲಿ ಸರ್ಕಾರಕ್ಕಿರುವ ತೊಂದರೆಗಳೇನು;

ಋ) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯನ್ನು ಜೀವ ವಿಮಾ ನಿಗಮದಂತೆ ಒಂದು ಉದ್ದಿಮೆಯನ್ನಾಗಿ ಪರಿವರ್ತಿಸಲು ರಾಜ್ಯದ ಹೈಕೋರ್ಟು ಹಾಗೂ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯದಲ್ಲಿ 1984ಮತ್ತು 1987ರಲ್ಲಿ ತೀರ್ಪು ನೀಡಿದ್ದರೂ ಸಹ ಸರ್ಕಾರ ಈ ಇಲಾಖೆಯನ್ನು ಉದ್ದಿಮೆಯನ್ನಾಗಿ ಪರಿವರ್ತಿಸದಿರಲು ಕಾರಣಗಳೇನು ?

ಶ್ರೀ ರಾಮಲಿಂಗರೆಡ್ಡಿ (ಹಣಕಾಸಿನ ರಾಜ್ಯ ಸಚಿವರು):–

ಅ) ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮಾ) ನಿಯಮ 1958ರನ್ವಯ ಸರ್ಕಾರಿ ನೌಕರರನ್ನು ಕಡ್ಡಾಯ ವಿಮೆಗೆ ಒಳಪಡಿಸುವುದು ಹಾಗೂ ಕರ್ನಾಟಕ ಸರ್ಕಾರದ ಮತ್ತು ಸರ್ಕಾರದ ಆರ್ಥಿಕ ಹಿತಾಸಕ್ತಿಯನ್ನು ಹೊಂದಿದ ವಾಹನಗಳನ್ನು ಕಡ್ಡಾಯ ವಿಮೆಗೆ ಒಳಪಡಿಸುವುದು.

ಆ) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ಭಾರತೀಯ ಜೀವ ವಿಮಾ ನಿಗಮ (ಕಾಯಿದೆ 1956ರ ಸೆಕ್ಷನ್ 44 (ಎಫ್)ರ ವಿನಾಯ್ತಿಯ ಮೇರೆಗೆ ತನ್ನ ಕಾರ್ಯಕ್ಷೇತ್ರವನ್ನು ರಾಜ್ಯ ಸರ್ಕಾರಿ

ನೌಕರರಿಗೆ ಮಾತ್ರ ಸೀಮಿತಗೊಳಿಸಿಕೊಂಡು ಕಾರ್ಯ ನಿರ್ವಹಿಸುತ್ತಿರುವುದರಿಂದ ಮತ್ತು ರಾಷ್ಟ್ರವ್ಯಾಪ್ತಿ ಕಾರ್ಯ ಕ್ಷೇತ್ರವಿರುವ ಭಾರತೀಯ ಜೀವ ವಿಮಾ ನಿಗಮಕ್ಕೆ ಸ್ಪರ್ಧಾತ್ಮಕ ನಿಲುವು ತಾಳಬಾರದ ಕಾರಣಕ್ಕಾಗಿ ಈ ಇಲಾಖೆಯು ಭಾರತೀಯ ಜೀವ ವಿಮಾ ನಿಗಮದಂತೆ ವಿಭಿನ್ನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಿಲ್ಲ.

ಇ) ವಿಮಾ ಪಾಲಿಸಿಗಳನ್ನು ವಿಮಾ ಇಲಾಖೆಯಿಂದ ಪಡೆಯಲು ಗರಿಷ್ಠ ಮಿತಿಯನ್ನು ನಿಗದಿಪಡಿಸಿಲ್ಲದ ಕಾರಣ ವಿಮಾ ಕಂತಿನ ಮೊತ್ತಕ್ಕೆ ಆದಾಯ ತೆರಿಗೆಯಲ್ಲಿ ವಿನಾಯಿತಿ ಸೌಲಭ್ಯ ಇರುತ್ತೆ.

ಈ) ದಿನಾಂಕ 31–3–1992 ರಂದಿನಂತೆ ಈ ಇಲಾಖೆಯಲ್ಲಿ ವಿಮೆಗೊಳಪಟ್ಟ ಸರ್ಕಾರಿ ನೌಕರರ ಸಂಖ್ಯೆ: 3,51,105 ಆಗಿರುತ್ತದೆ.

ಉ) ದಿನಾಂಕ 31–10–92 ರಂದಿನಂತೆ ವಿಮಾ ನಿಧಿಯ ಮೊತ್ತ ರೂ. 451.10 ಕೋಟಿ ರೂಪಾಯಿಗಳಾಗಿರುತ್ತದೆ.

ಈ ಹಣವನ್ನು ಕೆಳಕಂಡಂತೆ ವಿನಿಯೋಗಿಸಲಾಗುತ್ತಿದೆ:–

1) ಸರ್ಕಾರಿ ನೌಕರರಿಗೆ ನಿಯಮಾನುಸಾರ ಪಾಲಿಸಿ ಆಧಾರಿತ ಸಾಲ ನೀಡಲು
2) ವಿವಿಧ ಹಕ್ಕು ಪ್ರಕರಣಗಳ ಪಾವತಿಗೆ
3) ಉಳಿದ ಹಣವು ಸರ್ಕಾರದ ಸಂಚಿತ ನಿಧಿಯಲ್ಲಿ ತೊಡಗಿಸಿದ್ದು, ಈ ಹಣವನ್ನು ಆಯವ್ಯಯ ಸಂಪನ್ಮೂಲವೆಂದು ಪರಿಗಣಿಸಲಾಗುತ್ತಿದೆ.

ಊ) ರಾಜ್ಯ ಸರ್ಕಾರಿ ನೌಕರರ ಸಂಘದ ಜಂಟಿ ಸಮಾಲೋಚನಾ ಸಮಿತಿಯು ಹೌಸಿಂಗ್ ಕಾರ್ಪೋರೇಷನ್ ರಚಿಸುವ ಬಗ್ಗೆ ಕೋರಿದ್ದು, ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ಶ್ರೇಷ್ಠ ಉಚ್ಚ ನ್ಯಾಯಾಲಯಗಳ ತೀರ್ಪಿನಂತೆ ಹಾಗೂ ಕಾರ್ಮಿಕ ಆಯುಕ್ತರ ಉಲ್ಲೇಖದ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದ್ದು, ಕಾನೂನು ಇಲಾಖೆ ಅಭಿಪ್ರಾಯ ಬಂದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಕೋಮು ಗಲಭೆಯ ದೃಷ್ಟಿಯಲ್ಲಿ ತೆಗೆದುಕೊಂಡ ಸೌಹಾರ್ದತಾ ಕ್ರಮ

201 (1050) ಶ್ರೀ ಹೆಚ್.ಎಂ. ರೇವಣ್ಣ (ಮಂಗಡಿ):–

ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇತ್ತೀಚೆಗೆ ನಡೆದ ಕೋಮು ಗಲಭೆಯಿಂದ ಅಭಿವೃದ್ಧಿ ಕೆಲಸಗಳಿಗೆ ದಕ್ಕೆಯಾಗಿದೆಯೆ;

ಆ) ಕೋಮು ಸೌಹಾರ್ದತೆಗಾಗಿ ಸರ್ಕಾರವು ಕೈಗೊಂಡ ಕ್ರಮಗಳೇನು;

ಇ) ಕೋಮು ಗಲಭೆಗಳನ್ನು ಹುಟ್ಟು ಹಾಕುವವರ ವಿರುದ್ಧ ಸರ್ಕಾರವು ಕಠಿಣ ಕ್ರಮ ಕೈಗೊಳ್ಳುವುದೆ;

ಈ) ಹಾಗಿದ್ದಲ್ಲಿ ಅಂತಹ ಪ್ರಕರಣಗಳೆಷ್ಟು;